


ವಿರೋಧಿ ಸಂವತ್ಸರ ಚೈತ್ರ ಮಾರ್ಚ್ ೨೦೧೦ ಸಂಪುಟ–೪ ಸಂಚಿಕೆ–೩

ಗುರುವಾಣಿ

# ಗೋಹತ್ಯಾ ನಿಷೇಧ ಮುಂದಿನ ವಿಚಾರ



**ನೂರ್ಕಾಲ ಬಾಳಿ ಬದುಕುವ ಮನೋಭಾವವನ್ನು ಪೋಷಿಸಿಕೊಳ್ಳಬೇಕೋ–ಬೇಡವೋ?**

ಸಂವಿಧಾನ–ಕಾನೂನು ನಮ್ಮಗಳ ಬದುಕನ್ನು ವ್ಯವಸ್ಥಿತವಾಗಿ ಇರಿಸಿಕೊಳ್ಳುವ ನಿಟ್ಟಿನಲ್ಲಿ ರೂಪಿಸಿಕೊಂಡವು.

ಅವನ್ನು ಅರಿಯುವ, ರೂಪಿಸುವ ಹಾಗೂ ಕಡೆಯಲ್ಲಿ ಬರೆದಿಡುವ ಹಂತದಲ್ಲಿ ಪ್ರಕೃತಿಯ ಮಹಾ–ಸಂವಿಧಾನವೇ ಮಾರ್ಗದರ್ಶಿ, ಮಾರ್ಗ, ಗಮ್ಯ ಎಲ್ಲವೂ ಆಗಿತ್ತು. ಇಂದಿಗೂ ಹಾಗೇ ನಡೆಯುತ್ತಿದೆ.

ಎಡವುತ್ತಿರಬಹುದು, ಇಲ್ಲವೆಂದಲ್ಲ. ಅಲ್ಲೆಲ್ಲ ಪ್ರಕೃತಿಯ ಮರ್ಮ ಅರಿಯದೇ ಇರುವುದೇ ಕಾರಣವಾಗಿದೆ.

ಈ ಮಾತುಗಳನ್ನು ಲೋಕಾಭಿರಾಮವಾಗಿ ಹೇಳುತ್ತಿಲ್ಲ. ದುಃಖಮಯ ಸನ್ನಿವೇಶದಲ್ಲಿದ್ದೇವೆ.

ನಮ್ಮ ಕನ್ನಡ ಮಣ್ಣು 'ಗೋಹತ್ಯಾ ನಿಷೇಧದ ವಿಧೇಯಕ'ವನ್ನು ಕಾನೂನನ್ನಾಗಿ ರೂಪಿಸಿಕೊಡುವ ಪ್ರಕ್ರಿಯೆಯಲ್ಲಿದೆ. ಪ್ರಕ್ರಿಯೆ ಸ್ವಾಗತಾರ್ಹ.

ಆದರೆ, ಪ್ರಕ್ರಿಯೆಯ ಸಂದರ್ಭದ ಆಲೋಚನೆಗಳು, ಮಾತುಕತೆಗಳು ಬೇಸರ ಉಂಟುಮಾಡುತ್ತಿವೆ. ಪರ–ವಿರೋಧ ಯಾವುದೇ ಅಭಿಪ್ರಾಯಗಳನ್ನು ರಾಜಕೀಯದ ಏರುಗತಿಗೆ ಬಳಸಿಕೊಳ್ಳುತ್ತಿರುವುದು ಹೇಸಿಗೆ ತರಿಸುವ ವಿಚಾರ. ದೊಡ್ಡ ವಿಷಯದಲ್ಲಿ ಸಣ್ಣ ಬುದ್ಧಿ ತೋರಿಸುತ್ತಿರುವುದು ಅಸಹ್ಯ ಹುಟ್ಟಿಸುತ್ತಿದೆ.

ದೊಡ್ಡ ವಿಷಯ ಹೇಗೆ? ಅವಶ್ಯ ತಿಳಿಯಬೇಕು. ನಮ್ಮ ಸಮಾಜದಲ್ಲಿ ತಾಯಿಗೆ ದೊಡ್ಡ ಮಾನ್ಯತೆ. ಅಂತಹಾ ತಾಯಿಯೂ ಮಾತೃ ವಾತ್ಸಲ್ಯಕ್ಕೆ ಆಶ್ರಯಿಸಿದ್ದು ಗೋವನ್ನು. ಅಲ್ಲಿಯೂ ಮತ್ತೆ ತಾಯಿ, ಸಸ್ಯಾಹಾರಿ–ಮಾಂಸಾಹಾರಿ ಎನ್ನುವ ಯಾವ ಭೇದವೂ ಇಲ್ಲದೇ ವಾತ್ಸಲ್ಯದ ಆಶ್ರಯ ಅರಸಿದ್ದು ಗೋವಿನಲ್ಲಿ.

ಹಾಗಿರುವ ಗೋವು ವಾತ್ಸಲ್ಯದ ಒರತೆ ಉಕ್ಕುವಾಗ ಬೇಕು, ನಂತರ ಬೇಡ ಎಂದರೆ ಅರ್ಥವಿದೆಯೇ?

ಒಂದೊಮ್ಮೆ ಗೋವು, ವಾತ್ಸಲ್ಯದ ಒರತೆ ಮುಗಿದ ಅನಂತರದಲ್ಲಿ ತಾನು ಜನರಿಗೆ ಬೇಡ ಎಂದಾದರೆ, ಒರತೆ ಹರಿಸುವುದನ್ನು ಇಂದೇ ನಿಲ್ಲಿಸುತ್ತೇನೆ ಎಂಬ ಕಠೋರ ನಿರ್ಣಯ ತೆಗೆದುಕೊಂಡರೆ ನಮ್ಮಗಳ ಬದುಕು ಮುಂದೆ–ಮುಂದೆ ಸಾಗುವುದೆಂತು?

ತುಳಿದ ದಾರಿಯನ್ನು ಹೊಸಕಿ ಹಾಕಲು ಯಾವ ಸಂವಿಧಾನ ತಾನೇ ಹೇಳೀತು? ಹಾಗೆ ಯಾವುದೇ ಸಂವಿಧಾನ ಹೇಳಿದ್ದೇ ಆದರೆ ಜೀವಿಗಳನ್ನು ಉಳಿಸಿ, ಬೆಳೆಸುವ ತನ್ನ ಮೂಲ ತತ್ತ್ವಕ್ಕೇ ಕೊಡಲಿ ಪೆಟ್ಟನ್ನು ಕೊಟ್ಟುಕೊಂಡು ಉಳಿಯಲು ಎಷ್ಟು ಕಾಲ ಉಳಿಯಲು ಸಾಧ್ಯ?

**ಹೂರಣ**

**ಗುರುವಾಣಿ**
**ಪ್ರಶ್ನೋತ್ತರ**
**ಮಾಸದ ಗೋವು: ಜವಾರಿ**
**ಯಾತ್ರೆಯ 'ಲೈವ್' ಕಹಾನಿ**
**ವಿಧೇಯಕಕ್ಕೆ ಸ್ವಾಗತ**

ಪ್ರಕಾಶನ: IT4COW ಸಂಘಟನೆ
groups.yahoo.com/group/IT4COW
ಅಂತರಜಾಲ ತಾಣ: vishwagou.org, gougram.org
ಸಂಪರ್ಕ: govishva@gmail.com



ಗೋಹತ್ಯೆ ನಿಷೇಧಿಸಬೇಕೋ–ಬೇಡವೋ? ಮುಂದಿನ ವಿಚಾರ. ನೂರ್ಕಾಲ ಬಾಳಿ ಬದುಕುವ ಮನೋಭಾವವನ್ನು ಪೋಷಿಸಿಕೊಳ್ಳಬೇಕೋ–ಬೇಡವೋ? ಅರಿತುಕೊಳ್ಳಲೇಬೇಕು.

ಜಗತ್ತು ಹೀಗೇ ಇರುವುದಿಲ್ಲ. ನಮ್ಮಗಳ ತಪ್ಪಿಗೆ ಬಲವಾದ ಹೊಡೆತ, ಒಪ್ಪುಗಳಿಗೆ ಸೂಕ್ತ ಪುರಸ್ಕಾರ ಕೊಟ್ಟೇ ಕೊಡುತ್ತದೆ.

ತಪ್ಪೋ? ಒಪ್ಪೋ?

ಸಮಸ್ತ ಸೃಷ್ಟಿಯಲ್ಲಿ ನಾವೇ ದೊಡ್ಡ ಜನ ಎಂಬ ಸಂಗತಿಯನ್ನು ಬದಿಗಿರಿಸಿ, ಮುಕ್ತ ಮನಸ್ಸಿನಿಂದ ತೀರ್ಮಾನಿಸುವ.

ಗುರುವಿನ ಆಶೀರ್ವಾದ, ಮಾತೆಯ ಮಮತೆ ಎಲ್ಲವೂ ಸಾಥ್ ಕೊಡಲಿ.

ಎಲ್ಲರಿಗೂ ಒಳ್ಳೆಯದಾಗಲಿ

॥ ವಂದೇ ಗೋ ಮಾತರಮ್ ॥

ಶ್ರೀಮಜ್ಜಗದ್ಗುರು ಶಂಕರಾಚಾರ್ಯ ಗೋಕರ್ಣ ಮಂಡಲಾಧೀಶ

**ಶ್ರೀ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮೀಜಿ**

ಶ್ರೀರಾಮಚಂದ್ರಾಪುರಮಠ

# ಪ್ರಶ್ನೋತ್ತರ

ಪ್ರಶ್ನೆ: ಗೋ ಮಾಂಸ ಸಹಜ ಆಹಾರ ಯಾಕೆ ಅಲ್ಲ? ಮಾಂಸ ಮಾನವನ ಸಹಜ ಆಹಾರವಾದ ಕಾರಣ ಗೋಮಾಂಸ ಕೂಡ ಆಹಾರ ಆಗಬೇಕಲ್ಲ?

ಉ: ಯಾವುದೇ ಮಾಂಸ ಮಾನವನಿಗೆ ಸಹಜ ಆಹಾರ ಅಲ್ಲ.

ಪ್ರ: ಅನೇಕ ಸಾಕು ಪ್ರಾಣಿಗಳನ್ನು ಆಹಾರ/ಮಾಂಸದ ಉದ್ದೇಶದಿಂದಲೇ ಸಾಕುವಾಗ ಗೋವನ್ನು ಮಾತ್ರ ಯಾಕೆ ಬರೇ ಹಾಲಿಗಾಗಿ ಸಾಕುವುದು?

ಉ: ಗೋವಿನ ಹಾಲಿನಲ್ಲಿ A ವಿಟಮಿನ್, ಕೆರೋಟಿನ್ ಅಂಶ ಸಮೃದ್ಧವಾಗಿರುವ ಕಾರಣ ತಾಯಿ ಹಾಲಿನ ನಂತರ ಗೋವಿನ ಹಾಲೇ ಮಾನವನಿಗೆ ಅತಿ ಶ್ರೇಷ್ಠ ಆಹಾರ. ಬೇರೆ ಯಾವ ಪ್ರಾಣಿಯ ಹಾಲು ಗೋವಿನ ಹಾಲಿನಷ್ಟು ಶ್ರೇಷ್ಠವಾಗಿಲ್ಲ.

ಪ್ರ: ಹಾಲಿಗಾಗಿ ಮಿಶ್ರತಳಿ/ಎಮ್ಮೆಗಳು/ಆಡುಗಳು/ಯಾಕ್‌ಗಳು ಕೂಡ ಇವೆಯಲ್ಲ. ಗೋವಿನ ಹಾಲೇ ಯಾಕಾಗಬೇಕು?

ಉ: ಗೋವಿನ ಬೆನ್ನಿನ ಭಾಗದಲ್ಲಿ ಸೂರ್ಯಕೇತು ನಾಡಿಯಿಂದಾಗಿ ವಾತಾವರಣದಿಂದ ಹಾಗೂ ಸೂರ್ಯನ ಕಿರಣಗಳಿಂದ ಉತ್ತಮ ಅಂಶಗಳು ಹಾಲಿನ ಮುಖಾಂತರವಾಗಿ ಸಿಗುತ್ತವೆ. ಇದು ಬೇರೆ ಯಾವ ಪ್ರಾಣಿಯಲ್ಲಿಯೂ ಇಲ್ಲ. ಇದು ದೇಶೀಯ ತಳಿಯಲ್ಲಿ ಮಾತ್ರ.

**– ಸಂಗ್ರಹ: ಸದಾಶಿವ ಮೋಂತಿಮಾರ್ ಮತ್ತು ಉಲ್ಲಾಸ್** ಸಿ. ಕೆ.

# ಸಂಪಾದಕರ ನುಡಿ


ಬೆಂಗಳೂರಿನ ಗಿರಿನಗರದಲ್ಲಿ ಅಕ್ಟೋಬರ್ 27, 2007ರಂದು ಪೇಜಾವರ ಮಠಾಧೀಶ್ವರ ಶ್ರೀ ವಿಶ್ವೇಶತೀರ್ಥ ಶ್ರೀಪಾದಂಗಳವರಿಂದ ಈ **ಗೋ ವಿಶ್ವ** ಇ–ಪತ್ರಿಕೆಯ ಪ್ರಥಮ ಸಂಚಿಕೆಯ ಲೋಕಾರ್ಪಣೆ ಜರುಗಿತು. ನಿಮ್ಮ ಕೈಯಲ್ಲಿರುವುದು 30ನೆಯ ಸಂಚಿಕೆ. ಈ ಪತ್ರಿಕೆ ಅಂತರಜಾಲದಲ್ಲಿ ಮಾತ್ರ ಲಭ್ಯ. ಇದೇ ಸಂಚಿಕೆಯ ಮುಖಪುಟದಲ್ಲಿ ಇದರ ಜಾಲತಾಣದ ವಿಳಾಸವಿದೆ. ಅಲ್ಲಿಗೆ ಭೇಟಿ ನೀಡಿ ಹಿಂದಿನ ಸಂಚಿಕೆಗಳನ್ನು ಓದಬಹುದು. ದಯವಿಟ್ಟು ಈ ಇ–ಪತ್ರಿಕೆಯ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ನಮಗೆ ತಿಳಿಸಿ. ಈ ಪತ್ರಿಕೆಯಲ್ಲಿ ಪ್ರಕಟಿಸಲು ಲೇಖನಗಳೂ ಬೇಕು. ದಯವಿಟ್ಟು ನಿಮ್ಮ ಪ್ರತಿಕ್ರಿಯೆ ಮತ್ತು ಲೇಖನಗಳನ್ನು ಕಳುಹಿಸಿ ಕೊಡಿ. ನಮ್ಮ ವಿಳಾಸ – govishva@gmail.com

ಮಾಸದ ಗೋವು

# ಜವಾರಿ

**ಉತ್ತರ ಕರ್ನಾಟಕದ ಒಂದು ಉತ್ತಮ ತಳಿ ಜವಾರಿ ಈ ತಿಂಗಳ ಮಾಸದ ಗೋವು. ಉತ್ತಮ ಕೆಲಸಗಾರ ತಳಿ ಇದು. ಎಲ್ಲಾ ರೋಗಗಳಿಗೆ, ವಾತಾವರಣದ ವೈಪರೀತ್ಯಗಳಿಗೆ ನಿರೋಧಕ ಶಕ್ತಿ ಹೊಂದಿದವುಗಳು.**

ಮಾಸದ ಗೋವು ಅಂಕಣಗಳಲ್ಲಿ ಇದುವರೆಗೂ ಬರೆಯುತ್ತಿದ್ದುದು ಭಾರತೀಯ ಹೈನುಗಾರಿಕಾ ಸಂಸ್ಥೆ ಗುರುತಿಸಿ ಮಾನ್ಯ ಮಾಡಿದ ತಳಿಗಳ ಕುರಿತಾಗಿ. ಆದರೆ ಹೀಗೆ ಇನ್ನೂ ಮಾನ್ಯ ಮಾಡದ ಆದರೆ ಪ್ರತ್ಯೇಕ ತಳಿಯಾಗಿ ರೈತರಿಂದ ಗುರುತಿಸಿಕೊಂಡ ತಳಿಗಳು ಹಲವಿವೆ. ಅಂತ ತಳಿಗಳಲ್ಲಿ ಜವಾರಿ ಕೂಡ ಒಂದು.




ಒಂದು ಉತ್ತಮ ತಳಿಯಾಗಿ ಮಾನ್ಯತೆ ಸಿಗಬಹುದಾದ ಎಲ್ಲ ಲಕ್ಷಣಗಳಿದ್ದೂ ಜವಾರಿ ಒಂದು ತಳಿಯಾಗಿ ಅಧಿಕೃತವಾಗಿ ಗುರುತಿಸಲ್ಪಡುವಿಕೆ ತನ್ಮೂಲಕ ಸರಕಾರದಿಂದ ಆಗಬಹುದಾದ, ಆಗಲೇಬೇಕಾದ ತಳಿ ರಕ್ಷಣೆ, ಅಭಿವೃದ್ಧಿ, ಸಂಶೋಧನೆ, ಪೋಶಣೆ ಇವೆಲ್ಲವುಗಳಿಂದ ವಂಚಿತವಾಗಿದೆ. ಆದರೆ ರೈತ ಈ ತಳಿಯನ್ನು ನಂಬಿದ್ದಾನೆ. ಇದರ ಉಪಯುಕ್ತತೆಯನ್ನು ಅರ್ಥೈಸಿಕೊಂಡಿದ್ದಾನೆ. ಹೀಗಾಗಿ ಜವಾರಿ ಉತ್ತರ ಕರ್ನಾಟಕದ ಪ್ರಾಂತ್ಯಗಳಲ್ಲಿ ಇಂದೂ ಜನಪ್ರಿಯ ತಳಿ.



ಜವಾರಿ, ಕರ್ನಾಟಕ

ಜವಾರಿ ಬಳ್ಳಾರಿ, ರಾಯಚೂರು, ಗುಲ್ಬರ್ಗಾ ಒಟ್ಟಿನಲ್ಲಿ ಹೈದರಾಬಾದ್ ಕರ್ನಾಟಕದ ಜೀವನಾಡಿ ಎನ್ನಬಹುದು. ಜವಾರಿ ಉಭಯೋದ್ದೇಶಿತ ತಳಿ. ಉತ್ತಮ ಕೆಲಸಗಾರ ತಳಿ ಮಾತ್ರವಲ್ಲ; ಒಳ್ಳೆಯ ಹಾಲಿನ ತಳಿ ಕೂಡ.

ಜವಾರಿ ತಳಿ ಮಧ್ಯಮ ಗಾತ್ರದ ಸ್ವಲ್ಪ ಮಲೆನಾಡು ಗಿಡ್ಡ ತಳಿಯನ್ನು ಹೋಲುವ ತಳಿ. ಸಾಧು ಸ್ವಭಾವದ ಈ ತಳಿ ಸಾಮನ್ಯವಾಗಿ ಕಪ್ಪು ಅಥವಾ ಕೆಂಬೂದು ಬಣ್ಣಗಳಲ್ಲಿ ಕಾಣಬರುತ್ತದೆ. ಅಗಲವಾದ ಮುಖ, ಹೊರಚಾಚಿದ ಕೊಂಬು, ಹೋರಿಗಳಲ್ಲಿ ಸ್ವಲ್ಪ ದೊಡ್ಡದೆನ್ನಬಹುದಾದ ಡುಬ್ಬ, ಮುಂಚಾಚಿದ ಕಿವಿ ಇವು ಜವಾರಿಯ ದೈಹಿಕ ಲಕ್ಷಣಗಳು.

ಹೈದರಾಬಾದ್ ಕರ್ನಾಟಕ ಪ್ರದೇಶದಲ್ಲಿ ಇವುಗಳ ಸಂಖ್ಯೆ ಒಂದೂವರೆಯಿಂದ ಎರಡು ಲಕ್ಷದಷ್ಟಿದೆ ಎನ್ನುವುದು ಸ್ವಲ್ಪ ಸಮಾಧಾನದ ಸಂಗತಿ. ರೈತನಿಗೆ ತಳಿಯ ಮಹತ್ವ ಅರ್ಥವಾದರೆ, ಅದರ ಕುರಿತಾದ ಜಾಗ್ರತಿಯೊಂದು ಉಂಟಾದರೆ ಪ್ರಭುತ್ವದ ನಿರ್ಲ್ಯಕ್ಷದ ಹೊರತಾಗಿಯೂ ತಳಿ ಉಳಿದುಕೊಳ್ಳಬಹುದೆಂಬುದಕ್ಕೆ ಇದುವೆ ಸಾಕ್ಷಿ.

**– ಮಧುಕೇಶ ದೊಡ್ಡೇರಿ**

**ಮೂಲ : ಉತ್ತರ ಕರ್ನಾಟಕದ ತಳಿ**
**ವಿಭಾಗ : ಕೆಲಸಗಾರ ತಳಿ.**
**ಸಾಧಾರಣದಿಂದ ಸಣ್ಣ ಗಾತ್ರದವುಗಳು. ಎಲ್ಲಾ ರೋಗಗಳಿಗೆ, ವಾತಾವರಣದ ವೈಪರೀತ್ಯಗಳಿಗೆ ನಿರೋಧಕ ಶಕ್ತಿ ಹೊಂದಿದವುಗಳು.**
**ಬಣ್ಣ : ಪೂರ್ಣ ಕಪ್ಪು ಕೆಂಪು, ಬೂದು ಬಣ್ಣಗಳಲ್ಲಿ ಅಥವಾ ಇವುಗಳ ಮಿಶ್ರ ಬಣ್ಣಗಳು ಕಾಣಸಿಗುತ್ತದೆ.**
**ಮುಖ : ಸಣ್ಣದು.**
**ಕೊಂಬು : ಸಣ್ಣದು**
**ಕಾಲುಗಳು : ಶಕ್ತಿಯುತವಾಗಿರುತ್ತವೆ.**

ಅನುಭವ

# ಯಾತ್ರೆಯ 'ಲೈವ್' ಕಹಾನಿ

**ವಿಶ್ವಮಂಗಲ ಗೋಗ್ರಾಮ ಯಾತ್ರೆಯೊಂದಿಗೆ ನಾಲ್ಕು ತಿಂಗಳ ಕಾಲ ಭಾರತಾದ್ಯಂತ ಸುತ್ತಿದ ಭಾರತೀಶರಿಂದ ತಮ್ಮ ಅನುಭವ ಬಗ್ಗೆ ಒಂದು ಲಹರಿ**

ಸಪ್ಟೆಂಬರ್ 22, ಬೆಂಗಳೂರಿನಿಂದ ಕುರುಕ್ಷೇತ್ರಕ್ಕೆ ತೆರಳಲಿದ್ದ ಟೆಂಪೋಟ್ರಾವೆಲರ್ ಹೊರಡಲು ಇನ್ನೂ ನಾಲ್ಕಾರು ಗಂಟೆಗಳು ಬಾಕಿ ಇದ್ದವು. ಆಗ ಮೇಲಧಿಕಾರಿಗಳಿಂದ ಸೂಚನೆ ಬಂತು – ಶ್ರೀಮಠದ ಕಡೆಯಿಂದ ನಾನು ಯಾತ್ರೆಯಲ್ಲಿ ನಾಲ್ಕೂ ತಿಂಗಳು ಇರಬೇಕು. ಸರಿ, ಮತ್ತೇನು ಹೊರಡುವ ತಯಾರಿಯಲ್ಲಿ ತೊಡಗಿದೆ.

ಅದಕ್ಕೂ ಮುಂಚಿನ ಅಂತರಂಗವನ್ನು ಬಿಚ್ಚಿಡಲೇಬೇಕು. ನಾಲ್ಕೈದು ತಿಂಗಳಿನಿಂದ ಯಾತ್ರೆಯ ಸಾಹಿತ್ಯ ತಯಾರಿ, ವೆಬ್ಸೈಟ್ ಡಿಸೈನಿಂಗ್–ಅಪ್ಡೇಶನ್, ಪ್ರೆಸ್ ಮೀಟ್ ಅಂತ ಓಡಾಡುತ್ತಿದ್ದೆ. ಆಗ ಯಾತ್ರೆಯ ದೆಸೆಯಲ್ಲಿ ಪೂರಾ ಭಾರತದ ಆಂತರ್ಯವನ್ನು ಅರಿಯುವ ಆಸೆ ಬೃಹದಾಕಾರವಾಗಿ ಬೆಳೆಯಹತ್ತಿತು. ಪಕ್ಕದಲ್ಲೇ ಒಂದು ಚಿಂತೆಯೂ ಶುರುವಾಯಿತು. ಭಾರತ ನೋಡುವುದು ಸರಿ, ಆದರೆ ಪ್ರತಿದಿನ ಒಂದೇ ರೀತಿಯ ಕೆಲಸ ಮಾಡಬೇಕಲ್ಲ. ಅದು ನನ್ನಿಂದ ಸಾಧ್ಯವಾಗದು. ಆದ್ದರಿಂದ ಹೋಗುವುದಕ್ಕೆ ಹೆಚ್ಚಿನ ಉತ್ಸಾಹ ತೋರಿಸುತ್ತಿರಲಿಲ್ಲ.

ಅದೆಲ್ಲವನ್ನೂ ಮೀರಿ ಅಂತಿಮ ತೀರ್ಮಾನ ಮೇಲಿನಿಂದ ಬಂತು, ಹೊರಡುವ ತಯಾರಿಯಲ್ಲಿದ್ದೆ...



ನಮ್ಮ ಯಾತ್ರಾ ಸಾಹಿತ್ಯದ ಎಕ್ಸ್ಲೂಸಿವ್ ಡಿಸೈನರ್ ಮಂಜುನಾಥರು ಕಾಲ್ ಮಾಡಿ ನನ್ನ ಶರ್ಟ್ ಸೈಜ್ ಎಷ್ಟು? ಅಂತ ಢಬಾರನೆ ಕೇಳಿದರು. ಒಂದೆರಡು ಗಂಟೆಯ ನಂತರ ಶರ್ಟಿನೊಡನೆ ಬಂದರು. ನನ್ನ ಮತ್ತವರ ನಡುವೆ ಏರ್ಪಟ್ಟ ಹಾರ್ದಿಕ ಸಂಬಂಧಕ್ಕೊಂದು ಕೃತಜ್ಞತೆ ಸಲ್ಲಿಸುತ್ತಿದ್ದರು. ಕಣ್ಣಾಲಿಗಳು ಆಡಿದ್ದು ಗೊತ್ತಾಗುತ್ತಿರಲಿಲ್ಲ. ಆದರೆ, ನಮ್ಮಿಬ್ಬರ ಹೃದಯಗಳು ತೊಟ್ಟಿಕ್ಕುತ್ತಿದ್ದವು.

ಅಂತೂ ಅಂದಿನ ಸಂಜೆಯ 4ರ ಆಸುಪಾಸಿನಲ್ಲಿ ಹೊರಟು ಕೇಶವ ಕೃಪಾಕ್ಕೆ (ಸಂಘದ ಕರ್ನಾಟಕ ಪ್ರಾಂತ ಕಾರ್ಯಾಲಯ) ತಲುಪಿದೆವು.

ಜೋಳಿಗೆಯ ಮಾದರಿಯ ಎರಡು ಚೀಲಗಳೊಂದಿಗೆ ಶರಶ್ಚಂದ್ರ ಬಾಳಿಗರ ಆಗಮನ ಆಯಿತು. ಬರುಬರುತ್ತಲೇ ಅವರ ಅಸಂಖ್ಯ ಯಾತ್ರೆಗಳ ಅನುಭವವನ್ನು ಬಿಚ್ಚಿಡಲು ಶುರುಮಾಡಿದರು. ಅದರಲ್ಲಿ ಏಕಾತ್ಮತಾ ಯಾತ್ರೆ ಬಾರಿಬಾರಿಗೆ ಹೈಲೈಟ್ ಆಗುತ್ತಿತ್ತು. ಆಗ ನಿಜವಾಗಿಯೂ ಕಿರಿಕಿರಿ ಆಯಿತು. ಇವರಿಂದಾಗಿ ನೆಮ್ಮದಿಯ ಪ್ರಯಾಣಕ್ಕೆ ಕಲ್ಲುಬಿತ್ತು ಎಂಬ ಆಲೋಚನೆ ಆತಂಕ ಹುಟ್ಟಿಸಿತು. ಏಕೆಂದರೆ, ಕುರುಕ್ಷೇತ್ರ ನಮ್ಮಿಂದ ಹೆಚ್ಚುಕಡಿಮೆ 2500 ಕಿಲೋಮೀಟರ್ ದೂರದಲ್ಲಿತ್ತು.

ಆದರೆ, ಒಂದೊಂದೇ ಕಿಲೋಮೀಟರಿನ ದಾರಿ ಕಳೆಯುತ್ತಿದ್ದಂತೆ ಬಾಳಿಗರು ಹತ್ತಿರದವರಾದರು. ಅಷ್ಟೇ ಅಲ್ಲ, ಅವರೇ ನಮ್ಮ ವಾಹನದ ನಗೆಬುಗ್ಗೆಯಾದರು.

**ಊಟತಿಂಡಿ, ವಸತಿ :** ಒಟ್ಟಾರೆಯಾಗಿ ಯಾತ್ರಾ ಸಮಿತಿಯ ವ್ಯವಸ್ಥಾ ಜಾಲವನ್ನು ಕಂಡು ದಂಗಾದೆ. ಹುಡುಗಾಟವಲ್ಲ, ಯಾತ್ರೆ 108 ದಿನ ಇತ್ತು, ಅದೂ ಇಡೀ ಭಾರತದ ವ್ಯಾಪ್ತಿಯಲ್ಲಿ, ದಿನಕ್ಕೆ ಸರಾಸರಿ 4 ಕಾರ್ಯಕ್ರಮಗಳು, ಅದಕ್ಕಾಗಿ ಪ್ರತಿದಿನ ಸಾಗುತ್ತಿದ್ದ ಸರಾಸರಿ ದೂರ 200–250 ಕಿಲೋಮೀಟರ್, ಕೆಲವು ದಿನಗಳಲ್ಲಿ 350ರ ಆಸುಪಾಸಿನಲ್ಲಿ ಸಾಗಿದ್ದೂ ಉಂಟು, ಅದರ ಮಧ್ಯದಲ್ಲಿ ದಿನದ ನಾಲ್ಕು ಹೊತ್ತಿನ ತಿಂಡಿತೀರ್ಥಗಳ ವ್ಯವಸ್ಥೆ, ಅದೂ ಬೇರೆಬೇರೆ ಊರುಗಳಲ್ಲಿ, ರಾತ್ರಿ ತಂಗುವ ವ್ಯವಸ್ಥೆ, ಬೆಳಗ್ಗೆ ಎದ್ದು ತಯಾರಾಗುವ ವ್ಯವಸ್ಥೆ...

**ನಮ್ಮವರಾದರು :** ಒಂದು ಹದಿನೈದು ಇಪ್ಪತ್ತು ದಿನಗಳಾದ ಮೇಲೆ ದಿಲ್ಲಿಯ ಹುಡುಗರೊಂದಿಗೂ ದೋಸ್ತಿ ಆಯಿತು. ಅಲ್ಲಿಯವರೆಗೆ ಅವರು ನನ್ನನ್ನು ಶ್ರೀ ರಾಘವೇಶ್ವರಭಾರತೀ ಸ್ವಾಮೀಜಿಯವರ ಗೂಢಚಾರ ಅಂತ ಭಾವಿಸಿದ್ದರಂತೆ.

**ಫೋಟೋಗ್ರಾಫರ್ :** ಈಗಾಗಲೇ ಹೇಳಿದಂತೆ ದಿಲ್ಲಿಯವನು, ಜಿತೇಂದ್ರ ಕುಮಾರ್ ಅಲಿಯಾಸ್ ಕಾಲು, ಪರಿಶ್ರಮಿ. ಒಮ್ಮೆ ನನ್ನಲ್ಲಿ 'ಫೋಟೋ ಇಷ್ಟವಾಗುತ್ತಿದೆಯಾ? ಕೊರತೆ ಇದ್ದರೆ ಹೇಳಿ'. ನಾನು 'ಒಂದು ಸಣ್ಣ ಕೊರತೆ ಇದೆ. ಫೋಟೋಗಳು ಯಾತ್ರೆಯನ್ನು ನಾವು ಸಾಗುತ್ತಿರುವ ಊರಿನ ಮಧ್ಯದಲ್ಲಿ ಪ್ಲೇಸ್ ಮಾಡುತ್ತಿಲ್ಲ, ಅಂದರೆ ಕನ್ಯಾಕುಮಾರಿಯಲ್ಲಿ ಯಾತ್ರೆ ಇದ್ದರೆ, ಫೋಟೋ ನೋಡುವವನಿಗೆ ಅನ್ನಿಸಬೇಕು, ಯಾತ್ರೆ ಕನ್ಯಾಕುಮಾರಿಯಲ್ಲಿದೆ, ಅಂತಹಾ ಫೋಟೋಗಳು ಬೇಕು'.

**ಯಾತ್ರಾ ಪ್ರಮುಖ ಕೆ.ಈ.ಎನ್. ರಾಘವನ್ :** ಸರಳ, ನೇರ, ಸಜ್ಜನ, ಸಿಡುಕ, ಸ್ನೇಹಪರ ಸ್ವಭಾವದೊಂದಿಗೆ ಯಾತ್ರೆಯಲ್ಲಿ ಎಲ್ಲರ ಪ್ರೀತಿಗೆ ಪಾತ್ರವಾಗಿದ್ದವರು. ಆಲೋಚನೆ ಬರಬಹುದು, ಸಿಡುಕು–ಸ್ನೇಹಪರಗಳ ಸಂಧಾನ ಹೇಗೆ. ಒಂದೇ ಒಂದು ಸ್ಯಾಂಪಲ್. ಕೆಲವು ಕಡೆಗಳಲ್ಲಿ ಊಟ–ತಿಂಡಿ–ವಸತಿಯ ವ್ಯವಸ್ಥೆಗಳು ಸರಿಯಾಗದೇ, ವಾರಾವಾರಿಯವರೆಗೆ ಮಾತುಕತೆಯಾಗಿ, ರಸ್ತೆಯಲ್ಲೇ ಮಲಗುವ ತೀರ್ಮಾನವನ್ನು ವ್ಯಕ್ತಪಡಿಸಿ, ಮರುವ್ಯವಸ್ಥೆ ಆದಕೂಡಲೇ ಮರೆಯದೇ ದೋಸ್ತಿ



**ಯಾತ್ರಾ ಪ್ರಮುಖ ಕೆ.ಈ.ಎನ್. ರಾಘವನ್**

ಬೆಳೆಸುತ್ತಿದ್ದುದು ಅಚ್ಚರಿ ಮೂಡಿಸುತ್ತಿತ್ತು. ಯಾತ್ರೆಯಲ್ಲಿ ರಾಘವನ್ ಸೀಟಿ ಫೇಮಸ್. ಸೀಟಿಯ ಸದ್ದು ಯಾತ್ರಾ ಸಂಸಾರವನ್ನು ಮುಂದಿನ ಕಾರ್ಯಕ್ಕೆ ತೊಡಗಿಸುತ್ತಿತ್ತು. ಕಡೆಕಡೆಗೆ ಊರಿಂದೂರಿಗೆ ಹೊರಡುವ ಸಿದ್ಧತೆಯಾಗುತ್ತಿದ್ದರೂ, ಅವರ ಸೀಟಿ ಮೊಳಗುತ್ತಿರಲಿಲ್ಲ. ಆಗ ನಾವು ಅವರಲ್ಲಿ 'ರಾಘವನ್ ಜೀ ಇನ್ನೂ ಸೀಟಿ ಬಾರಿಸಿಲ್ವಾ? ಆಗವರು 'ಇಲ್ಲ, ಇನ್ನೂ ಹತ್ತು ನಿಮಿಷ ಬಾಕಿ ಇದೆ'. ಮಧ್ಯದಲ್ಲಿ ಒಂದು ತಿಂಗಳು ಅಸ್ವಾಸ್ಥ್ಯದ ಕಾರಣದಿಂದ ಬೆಂಗಳೂರಿನಲ್ಲಿ ಮಲಗಿದ್ದರು. ಆಗ ಅರ್ಥವಾಗುತ್ತಿತ್ತು – ಯಾತ್ರಾ ಪ್ರಮುಖರಾಗಿ ಕೆ.ಈ.ಎನ್. ರಾಘವನ್ ಅವರು ಯಾತ್ರೆಗೆ ಎಂತಹ ಖದರ್ ನೀಡಿದ್ದರು. (ಈ ಎರಡು ಮಾತುಗಳಲ್ಲಿ ಕಣ್ಣಾಲಿಗಳು ಆಡಿದುವು)

**ಹೊಂದಾಣಿಕೆ :** ಯಾತ್ರೆ ಶುರುವಾದಾಗ ಹಲವರು ಹತ್ತಾರು ದಿನಗಳಲ್ಲಿ ವಾಪಸ್ ಹೋಗುವುದಾಗಿ ಪಿರಿಪಿರಿ ಮಾಡುತ್ತಿದ್ದರು. ಯಾತ್ರೆ ತನ್ನ ಚರಮ ಸೀಮೆಯನ್ನು ತಲುಪುತ್ತಿದ್ದ ಹಾಗೆ ಯಾತ್ರೆ, ಯಾತ್ರಾ ಸಂಸಾರದಿಂದ ದೂರಾಗುವ ದುಃಖದಲ್ಲಿದ್ದರು.

**ಯಾತ್ರೆಯ ಗುರೂಜೀ – ಶರಶ್ಚಂದ್ರ ಬಾಳಿಗ :** ಅವರ ಪರಿಚಯ ಅವರ ಮಾತುಗಳಲ್ಲಿಯೇ 'ಸ್ನಾನ ಮಾಡದೇ ಒಂದು ವಾರ ಆಯಿತು, ಈ ಧೋತಿಯಲ್ಲಿ 108 ದಿನಗಳ ಯಾತ್ರೆಯ ಮಣ್ಣಿದೆ, ಇಂತಹ ಊಟ ಇದೇ ಮೊದಲಬಾರಿಗೆ ಸಿಕ್ಕಿದ್ದು, ಶೌಚಾಲಯದಲ್ಲೇ ಭಜನೆ–ಪ್ರಾರ್ಥನೆ ಮಾಡಿದೆ...' ಇತ್ಯಾದಿ, ಇತ್ಯಾದಿ. ಒಂದು ವಿಚಿತ್ರ ವ್ಯಕ್ತಿತ್ವ. ಇವರದ್ದು ಸಂಕ ಮುರಿದಲ್ಲಿ ಸ್ನಾನ ಅಲ್ಲ, ಯಾತ್ರೆ. ಯಾತ್ರೆಯಲ್ಲಿ ಪ್ರತಿಯೊಬ್ಬರಿಗೂ ಇವರ ಬಗೆಗೊಂದು ಕೌತುಕ. ಯಾತ್ರೆಯ ಅತ್ಯಂತ ಪ್ರಸಿದ್ಧ ವ್ಯಕ್ತಿ. ಯುವಕ–ಮುದುಕರಿಬ್ಬರಿಗೂ ಪ್ರಿಯ. ಇವರೊಟ್ಟಿಗಿದ್ದವರು ಹಸಿವಿನಿಂದ ನರಳಲು ಸಾಧ್ಯವಿಲ್ಲ ಆದ್ದರಿಂದ ಇವರು 'ಖಾನಾ ಖಜಾನಾ'. ಭಾರತದ ಮೂಲೆಮೂಲೆಗಳ ಆಪ್ತ ಪರಿಚಯ ಇರುವುದರಿಂದ



**ಯಾತ್ರಾ ಗುರೂಜಿಯವರಿಂದ ಆಶೀರ್ವಾದ!**

ಇವರು 'ಡಿಸ್ಕವರಿ'. ಯಾತ್ರೆಯಲ್ಲಿ ಸಮಸ್ತರ ಕಾಳಜಿ, ಪ್ರಸಾದ ವಿನಿಯೋಗ, ಗುಪ್ತಚಾರಿಕೆ, ಸಿಡಿ ವಿಕ್ರಯ – ಇವೆಲ್ಲ ಕ್ಷೇತ್ರಗಳಲ್ಲಿ ಅಲ್ಟಿಮೇಟ್ ಆಲ್ ರೌಂಡರ್.

**ಮಸ್ತ್ ಬಂದೋಂ ಕೇ ಸಾಥ್ ಜಬರ್ದಸ್ತ್ ದೋಸ್ತಿ :** ಯಾವಾಗಲೂ ಮಸ್ತಿಯಲ್ಲಿರುವ ಹುಡುಗರೊಂದಿಗೂ ಆಪ್ತ ಸ್ನೇಹ ಏರ್ಪಟ್ಟಿತು. (ಈ ಮಾತುಗಳಲ್ಲಿ ಸಾಗುವಾಗ ಅವರಿಂದ ದೂರಾದ ದುಃಖ ಕಾಡುತ್ತಿದೆ) ಅವರು ಸಮಸ್ತವನ್ನೂ ಬಿಚ್ಚಿಟ್ಟು, ಗುಟ್ಟಿಗೆ ಹೆಚ್ಚಿನ ಆಸ್ಪದ ಕೊಡದೇ ಬದುಕುತ್ತಿದ್ದ ಬಗೆ ಹಲವು ಪಾಠಗಳನ್ನು ಕಲಿಸಿತು.

**ಜನವರಿ 17, ಅನಿಸಿಕೆ :** ಯಾತ್ರೆಯ ಬಗೆಗೆ ಒಂದಷ್ಟು ಮಾತುಗಳನ್ನು ಹಂಚಿಕೊಳ್ಳುವ ಕಾರ್ಯಕ್ರಮ. ಒತ್ತಾಯಪೂರ್ವಕವಾಗಿ ವೇದಿಕೆಗೆ ದೂಡಿದರು. ಮಾತಾಡುವ ಇರಾದೆ ಇರಲಿಲ್ಲ. ಆದ್ದರಿಂದ ಹೆದರಿದ್ದೆ. ನಂತರ ಧೈರ್ಯಮಾಡಿ ಅಷ್ಟೂ ದರ್ದನ್ನು ಹೊರಹಾಕಿದೆ. ಯಾತ್ರೆ 108 ದಿನ ಯಶಸ್ವಿಯಾಗಿ ನಡೆಯಿತು. ರಚನಾತ್ಮಕವಾಗಿ ಮುಂದೇನು? ಏಕೆಂದರೆ ಯಾತ್ರೆಯ ಸಭೆಗಳಲ್ಲಿ ಗೋವಿನ ಭಾವನಾತ್ಮಕ, ಧಾರ್ಮಿಕ ಮೌಲ್ಯಗಳ ಬಗೆಗೆ ಬಿಂಬಿಸಲಾಯಿತೇ ಹೊರತು, ಒಬ್ಬ ಸಾಮಾನ್ಯನಿಗೆ ಗೋವಿನಿಂದ ಪ್ರತಿದಿನದ ಹೊಟ್ಟೆಬಟ್ಟೆಗೆ ಏನು ಸಿಗುತ್ತದೆ ಎಂಬ ಬಗೆಗೆ ವಿಶ್ವಾಸ ಕೊಡಿಸಲು ಸಾಧ್ಯವಾಗಲಿಲ್ಲ. ಈ ನಿಟ್ಟಿನಲ್ಲಿ ನೋವಿದೆ. ಒಂದು ಮಾತು ಅರ್ಥವಾಗಿದೆ. ಯಾತ್ರೆಯ ಒಂದೇ ಹೆಜ್ಜೆಯಲ್ಲಿ ಅಷ್ಟೂ ಹೆಜ್ಜೆಗಳನ್ನು ಕ್ರಮಿಸಲು ಸಾಧ್ಯವಾಗುವುದಿಲ್ಲ. ಒಂದು ಹೆಜ್ಜೆಯಾಗಿ ಇದನ್ನು ಸ್ವೀಕರಿಸುತ್ತೇನೆ. ಮುಂದಿನ ಹೆಜ್ಜೆಗಳ ಕಥೆ ಏನು? ಹೇಳಿ, ಹೇಳಲು ಕಷ್ಟ ಇದೆ. ಆದ್ದರಿಂದ ಹೇಳದಿದ್ದರೆ ಸುಮ್ಮನೆ ಕೂರುತ್ತೇನೆ.

**ಯಾತ್ರೆಯಲ್ಲಿ ಡ್ರೈವಿಂಗ್ :** ಯಾತ್ರೆಗೆ 3–4 ವರ್ಷಗಳ ಪೂರ್ವದಲ್ಲಿ ಕಾರು–ಜೀಪ್ ಓಡಿಸುತ್ತಿದ್ದೆ. ಕೈ ಕೂತಿರಲಿಲ್ಲ. ಯಾತ್ರೆಯಲ್ಲಿ ಟೆಂಪೋಟ್ರಾವೆಲರನ್ನೂ ಪರ್ಫೆಕ್ಟ್ ಆಗಿ ಓಡಿಸುವುದನ್ನೂ ಕಲಿತೆ. ಕಡೆಯ ಎರಡು ತಿಂಗಳಿನಲ್ಲಿ ಪ್ರತಿದಿನ ಸರಾಸರಿ 2–3 ಗಂಟೆಗಳ ಡ್ರೈವಿಂಗ್ ಮಾಡುತ್ತಿದ್ದೆ. ಹಲವು ಬಾರಿ ರಥದ ಪೈಲಟ್ ಆಗಿ ಗಾಡಿ ಓಡಿಸುವ ಅವಕಾಶ ಸಿಕ್ಕಿತ್ತು. ಅಗೊಂದು ರೀತಿಯ ಜೋಶ್ ಬರುತ್ತಿತ್ತು. ಗಾಡಿ ರಸ್ತೆಯಿಂದ ಕೆಳಗೆ ಇಳಿಯುವ ಪ್ರಶ್ನೆಯೇ ಇಲ್ಲ. ಎದುರಿನಿಂದ, ಪಕ್ಕದಲ್ಲಿ ಬರುತ್ತಿದ್ದ ಗಾಡಿಯನ್ನು ದಾರಿ ಕೊಡುವಂತೆ ಬಿನ್ನವಿಸುತ್ತಿದ್ದ ರೀತಿ, ತೋರಿಸುತ್ತಿದ್ದ ಧಿಮಾಕಿನ ರೀತಿ ಇವತ್ತಿಗೂ ಹೆಮ್ಮೆ ತರುತ್ತಿದೆ.

**ಆಂಧ್ರದ ರಕ್ಷಕರು :** ಯಾತ್ರೆಯಲ್ಲಿ ಪೋಲೀಸರ ಹೊರತಾಗಿ ಸ್ಥಳೀಯರೂ ಒದಗಿಸುತ್ತಿದ್ದ ರಕ್ಷಕ ತಂಡ ಇರುತ್ತಿತ್ತು. ಅಂತಹ ತಂಡಗಳಲ್ಲಿ ನಂ. 1 ಪಟ್ಟ ಆಂಧ್ರದ ತಂಡಕ್ಕೆ. ಅದೇನು ಜೋಶ್, ಕಾಳಜಿ, ಗೋ ರಥದ ಬಗ್ಗೆ ಗೌರವ. ಎಷ್ಟೇ ಟ್ರಾಫಿಕ್ ಇರಲಿ ರಥ ಮತ್ತವರ ವಾಹನದ ಮಧ್ಯ ಯಾವುದೇ ವಾಹನವನ್ನು ನುಸುಳಲು ಬಿಡುತ್ತಿರಲಿಲ್ಲ. ಕೆಂಪು ಟವೇರಾದಿಂದ ಐದಾರು ಹುಡುಗರು ಇಳಿಯುತ್ತಿದ್ದರು. ಅವರ ರಕ್ಷಣೆಯ ಮಾದರಿ ಪೋಲೀಸರನ್ನೂ ನಾಚಿಸುತ್ತಿತ್ತು.

**ಪ್ರಾದೇಶಿಕ ಪ್ರೀತಿ, ಕಾಳಜಿ :** ಒಂದೇ ಮಾತು, ಬೆರಳು ಕೇಳಿದರೆ ಹಸ್ತ ಕೊಡುತ್ತಿದ್ದರು. ರಾಜ್ಕೋಟಿನಿಂದ ಅಹಮದಾಬಾದಿಗೆ ತೆರಳುತ್ತಿದ್ದೆವು. ರಾಜ್ಕೋಟಿಗೆ 10–15 ಕಿಲೋಮೀಟರ್ ದೂರದಲ್ಲಿ ನಮ್ಮ ಟೆಂಪೋಟ್ರಾವೆಲರ್ ಆಕ್ಸಿಡೆಂಟಿನಲ್ಲಿ ಖರಾಬ್ ಆಯಿತು. ಗಾಡಿಯ ರಿಪೇರಿಂಗ್ ನಡೆಯುತ್ತಿತ್ತು. ಆಗ ರಾಜ್ಕೋಟಿನ ಒಬ್ಬ ಸಜ್ಜನ 'ಈ ಗಾಡಿ ರಿಪೇರಿ ಆದರೆ ಸರಿ. ಇಲ್ಲದಿದ್ದರೆ ಹೊಸ ಗಾಡಿ ತಂದು ನಿಲ್ಲಿಸುತ್ತೇನೆ. ಹೆದರುವ ಅಗತ್ಯ ಇಲ್ಲ'.

**5 ಈಡಿಯಟ್ಸ್ ಆಲ್ಬಮ್ (ಮೆಮೊರೆಬಲ್ ಮೊಮೆಂಟ್ಸ್ ಇನ್ ಯಾತ್ರಾ) :** ನಮ್ಮ ಯಾತ್ರಾ ವೆಬ್ ಸೈಟಿನ ಫೋಟೋ ಗ್ಯಾಲರಿಯಲ್ಲಿದೆ. ನಾಲ್ಕಾರು ದಿನಗಳ ಹಿಂದೆ, ಬೆಂಗಳೂರಿನಿಂದ ಹೊರಟಿದ್ದ ಟೆಂಪೋಟ್ರಾವೆಲರ್, ವಾಪಸ್ ಬೆಂಗಳೂರಿಗೆ ತೆರಳುತ್ತಲಿತ್ತು. ನಾಗಪುರದಿಂದ ಹೈದರಾಬಾದಿಗೆ ಹೋಗುತ್ತಲೇ, ಅಂದರೆ ಮಧ್ಯರಾತ್ರಿಯಲ್ಲಿ ಗಾಡಿಯ ವೈರಿಂಗ್ ಸುಟ್ಟುಹೋಯಿತು. ಸಹಾಯಕ್ಕಾಗಿ ಸುಮಾರು ತಡಕಾಡಿ ನನಗೆ ಫೋನ್ ಮಾಡಿದರು.




ಆಗ ತಕ್ಷಣ ನೆನಪಾಗಿದ್ದು – ಯಾತ್ರೆಯಲ್ಲಿ ಭೇಟಿಯಾದ ರವೀಂದ್ರ. ಕೂಡಲೇ ಫೋನಾಯಿಸಿದೆ. ಅವರ ಮೊದಲ ಮಾತೇ 5 ಈಡಿಯಟ್ಸ್ ಆಲ್ಬಮ್ ತುಂಬ ಚೆನ್ನಾಗಿದೆ. ನಂತರ ಗಾಡಿಯ ಮಾತುಕತೆ ಆಗಿ, ಆ ಕೂಡಲೇ ಸಹಾಯಕ್ಕೆ ಮುಂದಾದರು.

**ಕೃತಜ್ಞತೆ :** ನಮ್ಮ ವೆಬ್ ಡಿಸೈನರ್ ಧ್ಯೇಯ ಟೆಕ್ನಾಲಜೀಸ್ ತಂಡ, ಡಿಸೈನರ್ ಮಂಜುನಾಥ್, ಯಾತ್ರೆಯ ಕೇಂದ್ರ ಕಾರ್ಯಾಲಯ ತಂಡದವರು ಹೊತ್ತಲ್ಲದ ಹೊತ್ತಿನಲ್ಲಿ ಸಹಕಾರಕ್ಕೆ ಯಾಚಿಸಿದಾಗಲೂ ಆರ್ದ್ರ ಹೃದಯರಾಗಿ ಸಾಥ್ ನೀಡಿದ್ದಾರೆ. ಅವರ ಭಾವಕ್ಕೆ ಪ್ರತಿಯಾಗಿ ಶಬ್ದಗಳಿಲ್ಲ...

**– ಪಿ ಭಾರತೀಶ, 25 ಜನವರಿ 2010, ನವ ದೆಹಲಿ**

## 'ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕ'ಕ್ಕೆ ಸ್ವಾಗತ

ಮಾ.19 ರಂದು ಕರ್ನಾಟಕ ರಾಜ್ಯ ವಿಧಾನ ಸಭೆಯಲ್ಲಿ ಪಾರಿತವಾದ 'ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕ–2010'ನ್ನು ಶ್ರೀರಾಮಚಂದ್ರಾಪುರಮಠ ಹಾರ್ದ ಮನಸ್ಸಿನಿಂದ ಸ್ವಾಗತಿಸುತ್ತದೆ.

ಈ ಸಂದರ್ಭದಲ್ಲಿ ಪೂಜ್ಯ ಶ್ರೀ ರಾಘವೇಶ್ವರಭಾರತೀ ಮಹಾಸ್ವಾಮಿಗಳು ವ್ಯಕ್ತಪಡಿಸಿದ ಅಭಿಪ್ರಾಯ: 'ದೇಶದ ಬೆನ್ನೆಲುಬಾದ ರೈತನ ಜೀವನಾಡಿ ಗೋವು. ಅಂತಹಾ ಗೋವಿನ ಸಕಲ ಉಪಕಾರಗಳನ್ನೂ ಮರೆತು, ಕನಿಷ್ಠ ಪಕ್ಷ ಜೀವ ಕಾರುಣ್ಯವೂ ಇಲ್ಲದೇ, ನಿರ್ದಯವಾಗಿ, ಬರ್ಬರ ರೀತಿಯಲ್ಲಿ ಹತ್ಯೆ ಗೈಯ್ಯುತ್ತಿದ್ದೇವೆ. ಅದನ್ನು ತಡೆಗಟ್ಟುವಲ್ಲಿ ರಾಜ್ಯ ಸರ್ಕಾರದ ಈ ಕ್ರಮ ಸ್ವಾಗತಾರ್ಹ. 'ಕರ್ನಾಟಕ ಜಾನುವಾರು ಹತ್ಯೆ ಪ್ರತಿಬಂಧಕ ಮತ್ತು ಸಂರಕ್ಷಣಾ ವಿಧೇಯಕ–2010' ಇದು ವಿಧಾನ ಸಭೆಯಲ್ಲಿ ಪಾರಿತವಾಗಿದ್ದು, ದೇಶವ್ಯಾಪೀ ನಡೆಯುತ್ತಿರುವ ಗೋ ಸಂರಕ್ಷಣಾ ಹೋರಾಟಕ್ಕೆ ಸಂದ ಮತ್ತೊಂದು ಜಯ. ಬರುವ ದಿನಗಳಲ್ಲಿ ಈ ಜಯದ ಪ್ರಮಾಣ ಮತ್ತಷ್ಟು ವೃದ್ಧಿಗೊಂಡು, ನಮ್ಮೆಲ್ಲರ ಜೀವಗಳನ್ನು ಪೊರೆಯುತ್ತಿರುವ ಆ ಗೋಮಾತೆಗೆ ನೆಮ್ಮದಿಯ ಬದುಕು ಸಿಗುವಂತಾಗಲಿ ಎಂದು ಆಶಿಸುತ್ತೇವೆ'.